## 1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು

## ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ

**MVC**-750/2022 **PW**: 1

**ದಿಃ 06.08.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ 2 ನೇ ಎದುರುದಾರ ಪರ ಶ್ರೀ ಆರ್ ಜಿ ಬಿ ವಕೀಲರಿಂದ**

1.ದಿಃ06-04-2022 ರಂದು ಹುಬ್ಬಳ್ಳಿಯಿಂದ ಗದಗ ರೋಡನಲ್ಲಿ ಹಂಪಿಗೆ ಹೋಗುತ್ತಿದ್ದು ಆಗ ನಾವು ಹೋಗುತ್ತಿದ್ದ ಬಲಭಾಗಕ್ಕೆ ಶಿರಗುಪ್ಪಿ ಊರು ಬರುತ್ತದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಹುಬ್ಬಳ್ಳಿಯಿಂದ ಗದಗ ಹೊಸಪೇಟೆ ಹೋಗುವ ರಸ್ತೆ ರಾಷ್ಟ್ರಿಯ ಹೆದ್ದಾರಿ ಎಂದರೆ ಸರಿ. ಆ ಸಮಯದಲ್ಲಿ ರಾಷ್ಟ್ರಿಯ ಹೆದ್ದಾರಿ ಅಗಲಿಕರಣಕ್ಕೆ ಕೆಲಸ ನಡೆದಿತ್ತು ಎಂದರೆ ನನಗೆ ಅದರ ಬಗ್ಗೆ ಲಕ್ಷ್ಯ ಇಲ್ಲ ಎನ್ನುತ್ತಾರೆ. ಗದಗ ಕಡೆಯಿಂದ ಹುಬ್ಬಳ್ಳಿಗೆ ಬರುವಂತಹ ವಾಹನಗಳು ರಸ್ತೆ ರಿಪೇರಿ ಇರುವ ಕಾರಣ ಶಿರಗುಪ್ಪಿ ಹತ್ತಿರ ಬಲಕ್ಕೆ ಡೈವರಷನ್ ತೆಗೆದುಕೊಂಡು ಬರುತ್ತಿದ್ದವು ಎಂದರೆ ಸಾಕ್ಷಿ ನನಗೆ ಲಕ್ಷ್ಯ ಇಲ್ಲ ಎನ್ನುತ್ತಾರೆ. ನಾನು ಕಾರಿನಲ್ಲಿ ಹೋಗುತ್ತಿದ್ದು ಆ ಸಮಯದಲ್ಲಿ ನಿಮಗೆ ಮುಂದೆ ರಸ್ತೆ ಕಾಣಿಸುತ್ತಿತ್ತಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಈಗ ಮೇಲೆ ಹೇಳಿದ ವಿಷಯಗಳು ನನಗೆ ಗೊತ್ತಿದೆ ಅದನ್ನು ನಾನು ನೋಡಿರುತ್ತೇನೆಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ರಾಷ್ಟ್ರಿಯ ಹೆದ್ದಾರಿ ಅಧಿಕಾರಿಗಳು ಅಲ್ಲಿ ಕೆಲಸ ನಡೆಯುತ್ತಿರುವ ಕಾರಣ ಶಿರಗುಪ್ಪಿ ಹತ್ತಿರ ಬಲಕ್ಕೆ ಡೈವರಷನ್ ಕೊಟ್ಟು ವಾಹನಗಳಿಗೆ ಓಡಾಡಲು ಅವಕಾಶ ಕೊಟ್ಟರು ಗೊತ್ತಿಲ್ಲವೆಂದು ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಾನು ಸದರಿ ವಿಷಯಗಳನ್ನು ಒಪ್ಪಿಕೊಂಡರೆ ನನ್ನ ಕೇಸಗೆ ತೊಂದರೆಯಾಗುತ್ತದೆ ಎಂದು ಈಗ ಲಕ್ಷ್ಯ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸಾಕ್ಷಿ ಆ ರೀತಿ ಎನು ಇಲ್ಲ ಎನ್ನುತ್ತಾರೆ. ಸಾಕ್ಷಿಗೆ ಈ ಹಂತದಲ್ಲಿ ನಿಶಾನೆ ಪಿ 9 ತೋರಿಸಿ ಗದಗನಿಂದ ಹುಬ್ಬಳ್ಳಿಗೆ ಬರುವ ರಸ್ತೆಯನ್ನು ಮುಚ್ಚಿ ಶಿರಗುಪ್ಪಿಯಲ್ಲಿ



ಡಿವಿಯಷನ್ ಕೊಟ್ಟಿರುತ್ತಾರೆಂದರೆ ಸಾಕ್ಷಿ ನನಗೆ ಲಕ್ಷ್ಯ ಇಲ್ಲ ಎನ್ನುತ್ತಾರೆ. ನಿಶಾನೆ ಪಿ 4 ನ್ನು ಸಾಕ್ಷಿಗೆ ತೋರಿಸಿ ಅದರಲ್ಲಿ ಎನು ಬರೆದಿರುತ್ತಾರೆ ಎಂಬುವುದನ್ನು ನಾನು ತಿಳಿದುಕೊಂಡೆ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆಂದರೆ ಸಾಕ್ಷಿ ಹೌದು ಎನ್ನುತ್ತಾರೆ. ನಾವು ಹೋಗುತ್ತಿದ್ದ ರಸ್ತೆಯ ಬಲಗಡೆ

ಐರಾವತ್ ಬಸ್ಸ ಹುಬ್ಬಳ್ಳಿ ರಸ್ತೆಗೆ ಬರುತ್ತಿತ್ತು ಎಂದರೆ ಸಾಕ್ಷಿ ಅದರ ಬಗ್ಗೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಸದರಿ ಸ್ಥಳದಲ್ಲಿ ರೋಡ ಡಿವಾಯ್ಡರ್ ಇದೆ ಎಂದರೆ ಸಾಕ್ಷಿ ಇದೆ ಎನ್ನುತ್ತಾರೆ. ಸಾಕ್ಷಿಗೆ ಈ ಹಂತದಲ್ಲಿ ಪಂಚನಾಮೆ ಜೊತೆ ಸಲ್ಲಿಸಿರುವ ಪೋಟೋ ತೋರಿಸಿ ಅದರಲ್ಲಿ ರೋಡ ಡಿವಾಯ್ಡರ ಡ್ರೈವರ ಸೀಟನ ಪಕ್ಕದಲ್ಲಿ ಇದೆ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಅದರಲ್ಲಿರುವ ಬಸ್ಸ ಗದಗ ಕಡೆಯಿಂದ ಹುಬ್ಬಳ್ಳಿ ಕಡೆಗೆ ಬರುತ್ತಿತ್ತು ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಸದರಿ ಪೋಟೋ ಪ್ರತಿಯ ದೃಢೀಕೃತ ನಕಲನ್ನು ನಿಶಾನೆ ಆರ-1 ಎಂದು ಗುರ್ತಿಸಲಾಯಿತು. ದಿಃ06-04-2022 ರಂದು ದವಲಪಡಸಾಲ ಚಲಾಯಿಸುತ್ತಿದ್ದ ಕಾರ ಅತೀ ಜೋರಿನಿಂದ ಬರುತ್ತಿದ್ದನ್ನು ನೋಡಿ ಅದರಿಂದ ಆಗುವ ಅಪಘಾತವನ್ನು ತಪ್ಪಿಸುವ ಸಲುವಾಗಿ ಬಸ್ಸನ ಚಾಲಕ ರಸ್ತೆಯ ಪಕ್ಕಕ್ಕೆ ಬಸ್ಸನ್ನು ತೆಗೆದುಕೊಂಡಿದ್ದರಿಂದ ಅದು ಡಿವಾಯ್ಡರ ಮೇಲೆ ಹತ್ತಿದೆ ಎಂದರೆ ಸಾಕ್ಷಿ ನಮ್ಮ ಕಾರ ನಿಧಾನವಾಗಿಯೆ ಬರುತ್ತಿತ್ತು ಎನ್ನುತ್ತಾರೆ. ಸಾಕ್ಷಿಗೆ ಈ ಹಂತದಲ್ಲಿ ಮತ್ತೊಂದು ಛಾಯ ಚಿತ್ರದ ದೃಢೀಕೃತ ನಕಲನ್ನು ತೋರಿಸಿ ನಾವು ಹೋಗುತ್ತಿದಂತಹ ರಸ್ತೆಯ ಎಡಬದಿಗೆ ಇರುವ ಡಿವಾಯ್ಡರನ ಮೇಲೆ ಬಸ್ಸ ಹತ್ತಿದೆ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಆ ರೀತಿ ಬಸ್ಸ ಡಿವಾಯ್ಡರ ಮೇಲೆ ಹತ್ತಿ ನಿಂತುಕೊಂಡಿದೆ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಸದರಿ ದಾಖಲೆಯನ್ನು ನಿಶಾನೆ ಆರ 2 ಎಂದು ಗುರ್ತಿಸಲಾಯಿತು. ಸಾಕ್ಷಿಗೆ ಮತ್ತೊಂದು ದಾಖಲೆ ತೋರಿಸಿ ಪೋಲೀಸರು ನಿಂತಿರುವುದು ಗದಗ ಕಡೆಯಿಂದ ಹುಬ್ಬಳ್ಳಿ ಕಡೆಗೆ ಬರುವ ರಸ್ತೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಸಾಕ್ಷಿಗೆ ಮತ್ತೊಂದು ದಾಖಲೆ ತೋರಿಸಿ ತಾವು ಇದೇ ಕಾರನಲ್ಲಿ ಪ್ರಯಾಣ ಮಾಡುತ್ತಿದ್ದೀರಿ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಸದರಿ ಕಾರ ದಾವಲಸಾಬ ಕುಳಿತಿದ್ದ ಕಡೆ ಡ್ಯಾಮೇಜ್ ಆಗಿದೆ ಎಂದರೆ ಸಾಕ್ಷಿ ಮುಂದಿನಿಂದ ಪೂರ್ಣ ರೀತಿ ಡ್ಯಾಮೇಜ ಆಗಿದೆ ಎನ್ನುತ್ತಾರೆ. ಸದರಿ ದಾಖಲೆಯನ್ನು ನಿಶಾನೆ ಆರ 3 ಎಂದು ಗುರ್ತಿಸಲಾಯಿತು. ದವಲ ಪಡಸಾಲ ಹೊಡೆಯುತ್ತಿದಂತಹ ಕಾರ ಬ್ರೇಕ ಹಾಕಿದ್ದಕ್ಕೆ ಬ್ರೇಕ ಮಾರ್ಕ ಇದೆ ಎಂದು ನಿಶಾನೆ ಆರ 3 ನ್ನು ತೋರಿಸಲಾಗಿ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ.



ದವಲಪಡಸಾಲ ಇವರು ನಿಷ್ಕಾಳಜಿತನದಿಂದ, ಅತೀ ವೇಗವಾಗಿ ಕಾರನ್ನು ಚಲಾಯಿಸಿಕೊಂಡು ಬಂದು ಕಂಟ್ರೋಲ್ ತಪ್ಪಿ ಗದಗ ಕಡೆಯಿಂದ ಹುಬ್ಬಳ್ಳಿ ಕಡೆಗೆ ಬರುತ್ತಿದ್ದ ಬಸಗೆ ಡಿಕ್ಕಿ ಹೊಡೆದಿದ್ದು ನನಗೆ ಗೊತ್ತಿದೆ ಎಂದರೆ ಸಾಕ್ಷಿ ನಮ್ಮ ಗಾಡಿ ವೇಗವಾಗಿ ಹೋಗುತ್ತಿರಲಿಲ್ಲ ಎನ್ನುತ್ತಾರೆ. ಸದರಿ ವಾಹನವನ್ನು ನೋಡಿ ಸಡ್ಡನ್ ಆಗಿ ಬ್ರೇಕ ಹಾಕಿದ್ದಕ್ಕೆ ಬಂದಂತಹ ಗುರುತುಗಳು ನಿಶಾನೆ ಆರ 3 ರಲ್ಲಿ ಇರುವವು ಎಂದರೆ ಸಾಕ್ಷಿ ನಮ್ಮ ಗಾಡಿ ನಿಧಾನ ಇತ್ತು ಬಸ್ಸನವರೆ ಬ್ರೇಕ ಹಾಕಿದ್ದು ಎನ್ನುತ್ತಾರೆ. ದವಲಪಡಸಾಲ ಇವರು ನಿಧಾನವಾಗಿ ಗಾಡಿ ಚಾಲನೆ ಮಾಡುತ್ತಿದ್ದರೆಂದು ಪರಿಹಾರ ಪಡೆಯುವ ಸಲುವಾಗಿ ಸುಳ್ಳು ಹೇಳುತ್ತಿದ್ದೇನೆಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಈ ಅಪಘಾತಕ್ಕೆ ಸಂಬಂಧಿಸಿದಂತೆ ಪೋಲೀಸರು ದವಲಪಡಸಾಲ ಹಾಗೂ ಕೆಎಸಆರಟಿಸಿ ಬಸ್ಸನ ಚಾಲಕನ ಮೇಲೆ ಕೇಸ ದಾಖಲಿಸಿದ್ದಾರೆಂದರೆ ನನಗೆ

ಗೊತ್ತಿಲ್ಲ. ಪೋಲೀಸರು ತನಿಖೆ ಮಾಡಿ ಅವರ ಮೇಲೆ ತಪ್ಪಿದೆ ಎಂದು ದೋಷಾರೋಪಣೆ ಪಟ್ಟಿ ಹಾಕಿದ್ದಾರೆಂದರೆ ಸರಿ ನಾನು ಅದರಲ್ಲಿ ಸಾಕ್ಷಿ ಕೂಡಾ ಕೊಟ್ಟಿದ್ದೇನೆಂದರೆ ಸರಿ. ಸದರಿ ಪ್ರಕರಣದಲ್ಲಿ ಕೆಎಸಆರಟಿಸಿ ಬಸ್ಸನ ಚಾಲಕನ ತಪ್ಪಿಲ್ಲವೆಂದು ಆತನ ಪರ ಬಿಡುಗಡೆಯಾಗಿದೆ ಎಂದರೆ ಸಾಕ್ಷಿ ಬಿಡುಗಡೆ ಮಾಡಿರುವುದು ಸರಿಯಲ್ಲ, ತಪ್ಪಿದೆ ಎನ್ನುತ್ತಾರೆ. ಬಿಡುಗಡೆ ತಪ್ಪಿದೆ ಎಂದು ನಾನು ಮೇಲ್ಮನವಿ ಸಲ್ಲಿಸಿಲ್ಲವೆಂದರೆ ಸಾಕ್ಷಿ ಹಾಕಿಲ್ಲ ಎನ್ನುತ್ತಾರೆ. ಪಂಚನಾಮೆಯಲ್ಲಿಯೂ ಸಹ ಬಸ್ಸನ ಎಡಗಡೆ ಬದಿಯಲ್ಲಿ ಅಪಘಾತವಾಗಿದೆ ಎಂದು ತೋರಿಸಿದ್ದಾರೆಂದರೆ ಸಾಕ್ಷಿ ಅವರೆ ಬಲಗಡೆ ಬಂದಿದ್ದಾರೆಂದು ನುಡಿಯುತ್ತಾರೆ. ನಿಶಾನೆ ಪಿ 4 ರ ಜೊತೆ ಸಲ್ಲಿಸಿದ ನಕಾಶೆಯಲ್ಲಿ ಬಸ್ಸ ಗದಗ ರಸ್ತೆಯಿಂದ ಹುಬ್ಬಳ್ಳಿ ರಸ್ತೆ ಕಡೆ ಬರುತ್ತಿದ್ದು ನಾವು ಅದಕ್ಕೆ ವಿರುದ್ಧವಾಗಿ ಹುಬ್ಬಳ್ಳಿ ಕಡೆಯಿಂದ ಗದಗ ರಸ್ತೆ ಕಡೆ ಬರುತ್ತಿದೇವು ಎಂದರೆ ಸರಿ. ಪೋಲೀಸರು ತನಿಖೆ ಮಾಡುವ ಸಮಯದಲ್ಲಿ ಬಸ್ಸ ಬರುತ್ತಿದ್ದ ರಸ್ತೆ ಎಡಗಡೆ ಅಪಘಾತವಾಗಿದೆ ಎಂದು ತೋರಿಸಿದ್ದರು ಕೂಡಾ ನಾನು ಅದು ಸರಿಯಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಸದರಿ ಅಪಘಾತ ದವಲಪಡಸಾಲ ಇವರ ತಪ್ಪಿನಿಂದ ಆಗಿದ್ದರು ಕೂಡಾ ಪರಿಹಾರ ಪಡೆಯುವ ಉದ್ದೇಶದಿಂದ ನಾನು ಕೆಎಸಆರಟಿಸಿ ಬಸ್ಸ ತಪ್ಪಿನಿಂದ ಆಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸಾಕ್ಷಿ ಆ ರೀತಿ ಎನು ಇಲ್ಲ ಬಸ್ಸ ಚಾಲಕನ ತಪ್ಪಿನಿಂದ ಆಗಿದೆ ಎಂದು ನುಡಿಯುತ್ತಾರೆ.



**2.** ದಕ್ಷಾ ಪಡಸಾಲ ಇವರು ನನ್ನ 2 ವರ್ಷದ ಮಗ. ದಾವಾಲಬಾಯಿ ಪಡಸಾಲ ನನ್ನ ಗಂಡ ಎಂದರೆ ಸರಿ. ದಿಃ06.04.2022 ರಂದು ಜಿಜೆ 19 ಎಎ-8316 ಈ ವಾಹನವನ್ನು ಚಾಲನೆ ಮಾಡುತ್ತಿದ್ದರು ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಸದರಿ ಕಾರು ಪಟೋಲಿಯಾ ಇವರಿಗೆ ಸಂಬಂದಿಸಿದ ಕಾರು ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಸದರಿ ಕಾರಿನಲ್ಲಿ ದಿಃ06.04.2022 ರಂದು ನನ್ನ ಅತ್ತೆ, ಮಾವ, ಮಗ, ಮಗಳು ನಾನು ಮತ್ತು ಪಟೋಲಿಯಾ ಇವರ ಸಹೋದರಿ ಒಟ್ಟು 12 ಮಂದಿ ಹೊರಟಿದ್ದೆವು ಎಂದರೆ ಸಾಕ್ಷಿ ಒಂಬತ್ತು ಮಂದಿ ಇದ್ದೆವು ಎನ್ನುತ್ತಾರೆ. ಸದರಿ ಗಾಡಿಯಲ್ಲಿ ನಿಮ್ಮ ಅತ್ತೆ ಮಾವ ಇದ್ದರಾ ಎಂದರೆ ಸಾಕ್ಷಿ ಇದ್ದರು ಎನ್ನುತ್ತಾರೆ. ಪಟೋಲಿಯಾ ಇವರ ಪತ್ನಿ ಜಯಶ್ರೀ ಇವರು ಇದ್ದರು. ಜಯಶ್ರೀ ಜೊತೆಯಲ್ಲಿ ನನ್ನ ಮಗ ಮತ್ತು ಮಗಳು ಹಾಗೂ ನಾನು ಇದ್ದೆವು ಎಂದರೆ ಸಾಕ್ಷಿ ಇದ್ದೆವು ಎನ್ನುತ್ತಾರೆ. ಸಾಕ್ಷಿ ಮುಂದುವರೆದು ಅವರವರ ಜೊತೆಯಲ್ಲಿ ಅವರವರು ಇದ್ದರು ಎನ್ನುತ್ತಾರೆ. ನನ್ನ ಗಂಡ ಚಲಾಯಿಸುತ್ತಿದ್ದ ಕಾರಿನಲ್ಲಿ 12 ಜನ ಪ್ರಯಾಣಿಸುತ್ತಿದ್ದರೂ ಕೂಡಾ ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸಾಕ್ಷಿ ಸರಿಯಲ್ಲ ಎನ್ನುತ್ತಾರೆ. ಸದರಿ ನನ್ನ ಗಂಡ ಚಲಾಯಿಸುತ್ತಿದ್ದ ವಾಹನಕ್ಕೆ ಆ ದಿನ ವಿಮೆ ಇರಲಿಲ್ಲ ಎಂದರೆ ಸಾಕ್ಷಿ ಇತ್ತು ಎನ್ನುತ್ತಾರೆ. ಸದರಿ ಜಿಜೆ 19 ಎಎ-8316 ಈ ವಾಹನಕ್ಕೆ ವಿಮೆ

ಇತ್ತು ಎಂದು ಹೇಳಿದ್ದು ವಿಮಾ ಪಾಲಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ನಾನು ಹತ್ತನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ಇನ್ಸುರೆನ್ಸ ಎಂದರೆ ನನಗೆ ಗೊತ್ತಿಲ್ಲ. ಸದರಿ ದಿನಾಂಕದಂದು ನನ್ನ ಯಜಮಾನರು ಓಡಿಸುತ್ತಿದ್ದ ವಾಹನಕ್ಕೆ ವಿಮೆ ಇರಲಿಲ್ಲ ಆದರೂ ನಾನು ಇತ್ತು ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

3. ದಿನಾಂಕಃ06.04.2022 ರಂದು ಅಪಘಾತವಾಯಿತು ಎಂದು ಹೇಳಲಾಗಿದ್ದು ಸದರಿ ಅಪಘಾತ ನನ್ನ ಗಂಡನ ತಪ್ಪಿನಿಂದಲೇ ಆಗಿದೆ ಎಂದು ಚಾರ್ಜಶೀಟ ಸಲ್ಲಿಸಿರುತ್ತಾರೆಂದರೆ ಸಾಕ್ಷಿ ಅವರ ತಪ್ಪು ಇಲ್ಲ ಎನ್ನುತ್ತಾರೆ. ಕೆಎ–63 ಎಫ್ 0105 ನ ಚಾಲಕನವಿರುದ್ಧ ಇದ್ದ ಕ್ರಿಮಿನಲ್ಲ ಮೊಕದ್ದಮೆಯಿಂದ ಆತನ ತಪ್ಪು ಯಾವದು ಇಲ್ಲ ಎಂದು ಖುಲಾಸೆಯಾಗಿದ್ದಾರೆಂದರೆ ಸಾಕ್ಷಿ ಗೊತ್ತಿಲ್ಲ ಎನ್ನುತ್ತಾರೆ. ಸದರಿ ಅಪಘಾತದಿಂದ ನನ್ನ ಮಗನಿಗೆ ತರಚಿದ ಗಾಯಗಳು ಹಾಗೂ ಮೂಗಿಗೆ ಪೆಟ್ಟು ಬಿದ್ದಿದೆ ಎಂದು

5

ಬರೆದಿರುತ್ತಾರೆಂದರೆ ಸಾಕ್ಷಿ ಹೌದು ಎನ್ನುತ್ತಾರೆ. ದಿನಾಂಕಃ06.04.2022 ರಂದು ನನ್ನ ಮಗನಿಗೆ ಚಿಕಿತ್ಸೆ ನೀಡಿ ಅದೇ ದಿನ ಡಿಸ್ಚಾರ್ಜ ಮಾಡಿರುತ್ತಾರೆಂದರೆ ಸರಿ. ನಾನು ಹಾಜರುಪಡಿಸಿರುವ 12500/– ರೂ ಬಿಲ್ಲುಗಳು ಸೃಷ್ಟಿ ಮಾಡಿಕೊಂಡ ಬಿಲ್ಲುಗಳು ಅಷ್ಟು

ಹಣ ಖರ್ಚು ಮಾಡಿಲ್ಲ ಎಂದರೆ ಸಾಕ್ಷಿ ಗೊತ್ತಿಲ್ಲ ಎನ್ನುತ್ತಾರೆ. 10 ಲಕ್ಷ ರೂ ಪರಿಹಾರ ಕೇಳಿದ್ದು ಅದರಲ್ಲಿ ಯಾವ ಆದಾರದ ಮೇಲೆ ಕೇಳುತ್ತಿದ್ದೇನೆಂಬ ಬಗ್ಗೆ ನಮೂದು ಇಲ್ಲ ಎಂದರೆ ಸಾಕ್ಷಿ ನಾನೇನು ಹೇಳಲಿ ಎನ್ನುತ್ತಾರೆ. ನನ್ನ ಮಗನಿಗೆ ಆದ ಸದರಿ ಗಾಯಗಳು ಈಗಾಗಲೇ ಗುಣಮುಖವಾಗಿವೆ ಎಂದರೆ ಸಾಕ್ಷಿ ಆಗಿವೆ ಎನ್ನುತ್ತಾರೆ. ನನ್ನ ಮಗ ಈಗ ಶಾಲೆಗೆ ಹೋಗುತ್ತಿದ್ದಾನೆ. ಸದರಿ ಅಪಘಾತವಾದ ದಿನಾಂಕಃ06.04.2022 ರಂದು ನನ್ನ ಮಗ ಶಾಲೆಗೆ ಹೋಗುತ್ತಿರಲಿಲ್ಲ ಎಂದರೆ ಸಾಕ್ಷಿ ಹೋಗುತ್ತಿರಲಿಲ್ಲ ಎನ್ನುತ್ತಾರೆ. ನನ್ನ ಮಗನಿಗೆ ಯಾವದೇ ರೀತಿಯ ಅಂಗನ್ಯೂನತೆ ಆಗಿಲ್ಲ ಆದರೂ ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಸದರಿ ಅಪಘಾತ ನನ್ನ ಗಂಡನ ತಪ್ಪಿನಿಂದಾಗಿರುವ ಕಾರಣ ವಿಮಾ ಕಂಪನಿ ನಮಗೆ ಪರಿಹಾರ ಕೊಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ.

1, 2 ಮತ್ತು 4 ನೇ ಎದುರುದಾರ ಪರ ವಕೀಲರು ಮೇಲೆ ಹೇಳಿದ ಪಾಟೀ ಸವಾಲನ್ನು ಅಳವಡಿಸಿಕೊಳ್ಳುವದಾಗಿ ಕೋರಿರುತ್ತಾರೆ. ಕಾರಣ ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಳ್ಳಲಾಯಿತು.

**ಮರು ವಿಚಾರಣೆ ಇಲ್ಲಾ –**

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

**1 ನೇ ಅಧಿಕ ಹಿ.ದಿ.ನ್ಯಾಹುಬ್ಬಳ್ಳಿ**